ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಉಪನಿರ್ದೇಶಕರಕಚೇರಿ, ವಾರ್ತಾಭವನ, ಧನ್ವಂತರಿರಸ್ತೆ, ಮೈಸೂರು–570001, ದೂರವಾಣಿ:0821–2423251,
ಫ್ಯಾಕ್ಸ್0821–2423251 ಇ–ಮೇಲ್: mysorevarthabhavan@gmail.com
ಗ್ರೂಪ್ ವೆಬ್‌ಸೈಟ್: http://groups.google.com/group/mysorevarthabhavan

23ನೇ ಡಿಸೆಂಬರ್ 2016

# ಜನಪರ ಹಾಗೂ ಸಮಾಜಮುಖಿ ಶಿಕ್ಷಣ ನೀಡಿ: ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು.ಡಿ.23.– ವಿಶ್ವವಿದ್ಯಾನಿಲಯಗಳು ಉತ್ತಮ ನಾಗರೀಕರನ್ನುದೇಶಕ್ಕೆ ನೀಡಲುಜನಪರ ಹಾಗೂ ಸಮಾಜಮುಖಿ ಶಿಕ್ಷಣ ನೀಡಬೇಕುಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಅಭಿಪ್ರಾಯಪಟ್ಟರು.

ಅವರು ಇಂದು ಮೈಸೂರು ವಿಶ್ವವಿದ್ಯಾನಿಲಯದಕ್ರಾಫರ್ಡ್ ಹಾಲ್‌ನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ನಾಣ್ಯಗಳು, ಮೈಸೂರು ವಿಶ್ವವಿದ್ಯಾನಿಲಯದಇತಿಹಾಸ ತಿಳಿಸುವ ಸಚಿತ್ರ ಸಂಪುಟ ಹಾಗೂ ಕರ್ನಾಟಕ ವಿಶ್ವಕೋಶ ಸಂಪುಟ–1 ಇಂಗ್ಲೀಷ್‌ಅನುವಾದ ಬಿಡುಗಡೆಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವವಿದ್ಯಾನಿಲಯಗಳು ವಿದ್ಯಾರ್ಥಿಗಳಿಗೆ ವೈಜ್ಞಾನಿಕ, ಮಾನವೀಯತೆ ಹಾಗೂ ವೈಚಾರಿಕತೆಇರುವ ಶಿಕ್ಷಣ ನೀಡಬೇಕು.ಈ ಶಿಕ್ಷಣದಿಂದ ಸಮಾಜದಲ್ಲಿರುವ ಮೂಡನಂಬಿಕೆ ಹಾಗೂ ಇನ್ನಿತರ ಅನಿಷ್ಠಗಳನ್ನು ಹೋಗಲಾಡಿಸಿ ಮಾನವೀಯತೆ ಬೆಳೆಸಲು ಸಾಧ್ಯಎಂದರು.

ಮೂಲ ವಿಜ್ಞಾನಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳು ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳು ಮೂಲ ವಿಜ್ಞಾನದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರ ಜೊತೆಗೆ ಆಕರ್ಷಣೀಯವಾದರೀತಿ ಮೂಲ ವಿಜ್ಞಾನವನ್ನು

ಬೋಧಿಸಲು ಮುಂದಾಗಬೇಕು ಎಂದರು.

ಬೇರೆ ಮುಂದುವರೆದ ರಾಷ್ಟ್ರಗಳನ್ನು ಗಮನಿಸಿದರೆ ಭಾರತದೇಶದಲ್ಲಿಉನ್ನತ ಶಿಕ್ಷಣ ಪಡೆದವರ ಸಂಖ್ಯೆಕಡಿಮೆಇದೆ.ಫಿನ್‌ಲ್ಯಾಂಡ್‌ನಂತಹ ಸಣ್ಣದೇಶದಲ್ಲಿ ಶೇ.91 ರಷ್ಟುಜನಉನ್ನತ ಶಿಕ್ಷಣ ಪಡೆದಿದ್ದಾರೆ.ದಕ್ಷಿಣಕೋರಿಯಾದಲ್ಲಿ ಶೇ. 95, ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ಶೇ. 89. ಯುನೈಟೆಡ್‌ಕಿಂಗ್‌ಡಂ ನಲ್ಲಿ ಶೇ. 57 ಇದ್ದರೆ.ಭಾರತದಲ್ಲಿ ಶೇ.21 ಮಾತ್ರಉನ್ನತ ಶಿಕ್ಷಣ ಪಡೆದವರುಇದ್ದಾರೆ.ಭಾರತದಲ್ಲಿ ಹೆಚ್ಚಿನಜನಉನ್ನತ ವ್ಯಾಸಂಗದಲ್ಲಿ ತೊಡಗಬೇಕು ಎಂದರು.

ಮೈಸೂರು ವಿಶ್ವವಿದ್ಯಾನಿಲಯ ನೂರು ವರ್ಷ ಪೂರೈಸಿದ್ದು, ಇದುದೇಶದಲ್ಲೇ ಮಾತ್ರವಲ್ಲ ವಿಶ್ವದಲ್ಲೇ ಪ್ರತಿಷ್ಠಿತ ವಿಶ್ವವಿದ್ಯಾನಿಲಯವಾಗಿದೆ, ನೂರು ವರ್ಷದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಉಪನ್ಯಾಸ ಸೇರಿದಂತೆ ವೈವಿಧ್ಯಮಯಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕನ್ನಡ ಭಾಷೆಗೆಎರಡು ಸಾವಿರ ವರ್ಷಕ್ಕೂ ಹೆಚ್ಚಿನಇತಿಹಾಸವಿದೆ. ಶಾಸ್ತ್ರೀಯ ಸ್ಥಾನಮಾನ ಪಡೆದುಕೊಂಡಿದೆ.ಈ ಭಾಷೆ ಹೊರ ರಾಜ್ಯಗಳಲ್ಲಿ ಮಾತ್ರವಲ್ಲದೇಶ ವಿದೇಶಗಳಲ್ಲೂ ಪರಿಚಯವಾಗಬೇಕು.ಇಂದು ಹೊರತಂದಿರುವಕರ್ನಾಟಕ ವಿಶ್ವಕೋಶ ಸಂಪುಟ–1 ಇಂಗ್ಲೀಷ್‌ಅನುವಾದಕನ್ನಡ ಭಾಷೆ ಕಲಿಯಲು ಅನುಕೂಲಕರವಾಗಿದೆ ಎಂದರು.

ಕೇಂದ್ರ ಸರ್ಕಾರ ನಡೆಸುವ ನೀಟ್ ಪರೀಕ್ಷೆಯನ್ನು ತಮಿಳು, ತೆಲಗು ಸೇರಿದಂತೆ 8 ವಿವಿಧ ಭಾಷೆಗಳಲ್ಲಿ ಪ್ರಶ್ನೆ ಪತ್ರಿಕೆಇರುತ್ತದೆ. ಕರ್ನಾಟಕರಾಜ್ಯದ ವಿದ್ಯಾರ್ಥಿಗಳು ಸಹ ಪರೀಕ್ಷೆ ಬರೆಯಲುಅನುಕೂಲಕರವಾದರೀತಿಕನ್ನಡ ಭಾಷೆಯಲ್ಲೂ ಸಹ ಪ್ರಶ್ನೆಪತ್ರಿಕೆ ನೀಡಬೇಕುಎಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.ಇನ್ನೊಮ್ಮೆ ಸಹ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು.ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯುವಂತೆ ಕರ್ನಾಟಕದ ಲೋಕಸಭಾ ಸದಸ್ಯರಿಗೂ ಸಹ ತಿಳಿಸಲಾಗುವುದು.ಕನ್ನಡ ನಮ್ಮ ಮಾತೃ ಭಾಷೆಯಾಗಿದ್ದು, ಇದನ್ನುಯಾರು ಸಹ ಕಡೆಗಾಣಿಸಬಾರದು ಎಂದರು.

ಇದೇ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ನಾಣ್ಯಗಳು, ಮೈಸೂರು ವಿಶ್ವವಿದ್ಯಾನಿಲಯದಇತಿಹಾಸ ತಿಳಿಸುವ ಸಚಿತ್ರ ಸಂಪುಟ ಹಾಗೂ ಕರ್ನಾಟಕ ವಿಶ್ವಕೋಶ ಸಂಪುಟ–1 ಇಂಗ್ಲೀಷ್‌ಅನುವಾದದರಚನೆ ಮಾಡಿದಗಣ್ಯರನ್ನು ಗೌರವಿಸಿದರು. ಮೈಸೂರುಜನತೆಗೆ ಮುಂಗಡವಾಗಿಕ್ರಿಶ್‌ಮಸ್ ಹಾಗೂ ಹೊಸ ವರ್ಷಕ್ಕೆ ಶುಭಾಷಯಕೋರಿದರು.

ಕಾರ್ಯಕ್ರಮದಲ್ಲಿಖ್ಯಾತ ವಿದ್ವಾಂಸ ಹಂ.ಪ.ನಾಗರಾಜಯ್ಯ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ: ರಂಗಪ್ಪ ಸೇರಿದಂತೆಇನ್ನಿತರಗಣ್ಯರು ಉಪಸ್ಥಿತರಿದ್ದರು.

# ಮುಖ್ಯಮಂತ್ರಿಗಳಿಂದ ವಿದ್ಯುತ್‌ಉಪಕೇಂದ್ರಕ್ಕೆ ಶಂಕುಸ್ಥಾಪನೆ



ಮೈಸೂರು.ಡಿ.23.–ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ಮೈಸೂರು ನಗರವಿಶ್ವವಿದ್ಯಾನಿಲಯದ ಸರಹದ್ದಿನ ಕುಕ್ಕರಹಳ್ಳಿ ಕೆರೆಧೋಬಿಘಾಟ್ ಮುಂಭಾಗದಲ್ಲಿ ನೂತನವಾಗಿ ಸ್ಥಾಪಿಸಲಾಗುವ 66/11 ಕೆವಿ ಗ್ಯಾಸ್‌ಇನ್ಸುಲೇಟೆಡ್ ವಿದ್ಯುತ್ ಉಪ ಕೇಂದ್ರದ ಶಂಕುಸ್ಥಾಪನೆಯನ್ನುಇಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ನೆರವೇರಿಸಿ ಮಾತನಾಡಿದರು.

ಈ ಉಪಕೇಂದ್ರದಯೋಜನಾ ವೆಚ್ಚ 35.21 ಕೋಟಿರೂ.ಆಗಿದ್ದು, ಇದರಿಂದ ವಾರ್ಷಿಕ 4.38ಲಕ್ಷಯೂನಿಟ್ ಹಾಗೂ ರೂ.25.88 ಲಕ್ಷಉಳಿತಾಯವಾಗಲಿದೆ.ಧೋಬಿ ಘಾಟಿನ ಸರಹದ್ದಿನಲ್ಲಿರುವ ಡಿಸಿ ಕಚೇರಿ, ಸರಸ್ವತಿಪುರಂ, ಜಿಲ್ಲಾ ಪಂಚಾಯಿತಿಕಚೇರಿ, ಕಲಾಮಂದಿರ, ಕೋರ್ಟ್ ಸಂಕೀರ್ಣ, ಮಾನಸಗಂಗೋತ್ರಿಆವರಣ, ಕುವೆಂಪುನಗರದ ಕೆಲವು ಭಾಗಗಳಿಗೆ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲಾಗುವುದು. ವಿದ್ಯುತ್ ಅಡಚಣೆಗಳು ಕಡಿಮೆಯಾಗುವುದರಜೊತೆಗೆ ವೋಲ್ಟೇಜ್ ಸುಧಾರಣೆ ಸಹ ಆಗಲಿದೆಎಂದರು.

ಧೋಬಿ ಘಾಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿಜಯನಗರ, ಭೋಗಾದಿ, ಎಫ್‌ಟಿಎಸ್ ಹಾಗೂ ಡಿ.ಕೆ.ಮೈದಾನ ವಿದ್ಯುತ್ ಉಪಕೇಂದ್ರಗಳಿಂದ ವಿದ್ಯುತ್ ಪೂರೈಸುತ್ತಿದ್ದು, ವಿದ್ಯುತ್ ಅಡಚಣೆಗಳು ಹಾಗೂ ವೋಲ್ಟೇಜ್ ವ್ಯತ್ಯಯವಾಗುತ್ತಿದ್ದು, ಈ ಹೊಸ ಉಪಕೇಂದ್ರದ ಸ್ಥಾಪನೆಯಿಂದ ತೊಂದರೆಗಳು ನಿವಾರಣೆಯಾಗುತ್ತದೆಎಂದರು.

ಇದೇರೀತಿ ಮೈಸೂರಿನ 3 ವಿವಿಧ ಭಾಗಗಳಲ್ಲಿ ಗ್ಯಾಸ್‌ಇನ್ಸುಲೇಟೆಡ್ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವುದರಿಂದ ವಿದ್ಯುತ್ ಸಮಸ್ಯೆಯನ್ನು ನಿವಾರಿಸಬಹುದಾಗಿದ್ದು, ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಯ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದುಎಂದರು.

ಮೈಸೂರುಜಿಲ್ಲೆಯಅಭಿವೃದ್ಧಿಗಾಗಿ ಹಲವಾರು ಕಾಮಗಾರಿಗಳನ್ನು ಈಗಾಗಲೇ ಹಮ್ಮಿಕೊಳ್ಳಲಾಗಿದೆ.ಚಾಮರಾಜ ವಿಧಾನಸಭಾಕ್ಷೇತ್ರದ ಶಾಸಕರುಕ್ಷೇತ್ರದಅಭಿವೃದ್ಧಿಗಾಗಿಯೋಜನೆ ರೂಪಿಸಿ ಅನುದಾನ ಬಿಡುಗಡೆ ಮಾಡುವಂತೆ ಬೇಡಿಕೆಇಟ್ಟಿರುತ್ತಾರೆ.ಈ ಬಗ್ಗೆ ಚಿಂತಿಸಲಾಗುವುದುಎಂದರು.

ಕಾರ್ಯಕ್ರಮದಲ್ಲಿ ಶಾಸಕ ವಾಸು, ಮೈಸೂರುಮೈಸೂರು ಮಹಾನಗರ ಪಾಲಿಕೆ ಮಹಾಪೌರರಾದ ಎಂ.ಜೆ.ರವಿಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದಅಧ್ಯಕ್ಷ ಸಿದ್ದರಾಜು, ಮೈಸೂರು ಬಣ್ಣ ಮತ್ತುಅರಗುಕಾರ್ಖಾನೆಅಧ್ಯಕ್ಷ ಹೆಚ್.ಎ. ವೆಂಕಟೇಶ್, ಮಾಜಿ ಮಹಾಪೌರರು ಹಾಲಿ ಸದಸ್ಯಆರ್. ಲಿಂಗಪ್ಪಸೇರಿದಂತೆಇನ್ನಿತರಗಣ್ಯರು ಉಪಸ್ಥಿತರಿದ್ದರು.

## ಕರ್ತವ್ಯ ಕೂಟಗಳು ಕೌಶಲ್ಯತೆ ಹೆಚ್ಚಿಸುತ್ತದೆ: ಸಿದ್ದರಾಮಯ್ಯ



ಪೊಲೀಸ್ ಕರ್ತವ್ಯ ಕೂಟಗಳಲ್ಲಿ ಪೊಲೀಸರು ಭಾಗವಹಿಸುವುದರಿಂದ ಅವರ ಕೆಲಸ ನಿರ್ವಹಣೆಯಲ್ಲಿ ವೃತ್ತಿಪರ ಕೌಶಲ್ಯತೆ ಹಾಗೂ ದಕ್ಷತೆಯನ್ನು ಹೆಚ್ಚಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಅವರು ಇಂದು ಪೊಲೀಸ್ ಪೆರೇಡ್ ಮೈದಾನದಲ್ಲಿ ಆಯೋಜಿಸಲಾಗಿದ್ದ 60 ನೇ ಪೊಲೀಸ್ ಕರ್ತವ್ಯ ಕೂಟದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. 1956 ರಲ್ಲಿ ನಡೆದ ಕರ್ತವ್ಯ ಕೂಟದಲ್ಲಿ ಕೇವಲ ಫೈರಿಂಗ್ ಸ್ಪರ್ಧೆಯನ್ನು ಮಾತ್ರ ಆಯೋಜಿಸಲಾಗಿತ್ತು ನಂತರ ಪೊಲೀಸ್ ಇಲಾಖೆಯಲ್ಲಿ ಕೆಲಸದ ರೀತಿ ಬದಲಾವಣೆಯಾದಂತೆ ಇಂದು ಪೊಲೀಸ್ ಕರ್ತವ್ಯ ಕೂಟದಲ್ಲಿ ವಿವಿಧ ರೀತಿಯ ಸ್ಪರ್ಧೆಗಳನ್ನು ಅಯೋಜಿಸಲಾಗುತ್ತಿದೆ ಎಂದರು.

ಪೊಲೀಸ್ ಇಲಾಖೆ ಇಂದು ಸೈಬರ್ ಕ್ರೈಮ್, ಅಂತರಾಷ್ಟ್ರೀಯ ಮಟ್ಟದ ಅಪರಾಧ , ಆರ್ಥಿಕ ಅಪರಾಧ ಹಾಗೂ ಮುಂತಾದ ಅಪರಾಧಗಳನ್ನು ಕೆಳಹಂತದಲ್ಲೇ ಪತ್ತೆ ಹಚ್ಚಬೇಕಿದ್ದು, ಇದಕ್ಕಾಗಿ ವೈಜ್ಞಾನಿಕ ತಂತ್ರಜ್ಞಾನ ಹಾಗೂ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಿರುತ್ತದೆ ಎಂದರು.

ಪೊಲೀಸ್ ಇಲಾಖೆ ಸಿಬ್ಬಂದಿಗಳು ಹೆಚ್ಚು ಒತ್ತಡದಲ್ಲಿ ಕೆಲಸ ನಿರ್ವಹಿಸುತ್ತಾರೆ. ಈ ಒತ್ತಡವನ್ನು ಕಡಿಮೆ ಮಾಡಲು ಹೆಚ್ಚು ಪೊಲೀಸ್ ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ಕ್ರಮ ವಹಿಸಲಾಗುತ್ತಿದೆ. ಪೊಲೀಸ್‌ರಿಗೆ ಬೇಗನೆ ಬಡ್ತಿ ನೀಡಲು, ಹೆಚ್ಚಿನ ಸಂಬಳ, ವಿಶೇಷ ಭತ್ಯೆ, ಪೊಲೀಸ್ ಸಿಬ್ಬಂದಿಗಳಿಗೆ ಕ್ವಾಟ್ರಸ್, ಆರೋಗ್ಯ ಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ವೇತನ, ಭತ್ಯೆ, ಪಿಂಚಣಿ ನೀಡುವ ಬಗ್ಗೆ ವೇತನ ಆಯೋಗ ರಚಿಸಿ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಪೊಲೀಸರಿಂದ ಪ್ರಮಾಣಿಕತೆ ಮತ್ತು ವಿನಯತೆಯನ್ನು ನಿರೀಕ್ಷಿಸುತ್ತಾರೆ. ಪೊಲೀಸ್‌ರು ಜನಾನುರಾಗಿಯಾಗಿ ಕಾರ್ಯನಿರ್ವಹಿಸುವುದರೊಂದಿಗೆ ಸಮಾಜಿಕ ಸಮಸ್ಯೆಗಳನ್ನು ಸಹ ಪರಿಹರಿಸಲು ಮುಂದಾಗಬೇಕು ಎಂದರು.

ವಿವಿಧ ರಾಜ್ಯದಿಂದ ಆಗಮಿಸಿ ಪೊಲೀಸ್ ಕರ್ತವ್ಯ ಕೂಟದಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಶುಭ ಹಾರೈಸಿದರು. ಕರ್ನಾಟಕ ರಾಜ್ಯದಿಂದ ಭಾಗವಹಿಸಿ ಪೊಲೀಸ್ ಕರ್ತವ್ಯ ಕೂಟದಲ್ಲಿ ಚಿನ್ನದ ಪದಕ ವಿಜೇತರಿಗೆ ಮೂರು ಲಕ್ಷ ರೂ , ಬೆಳ್ಳಿ ಪದಕ ವಿಜೇತರಿಗೆ ಎರಡು ಲಕ್ಷ ರೂ ಹಾಗೂ ಇತರೆ ಪದಕ ವಿಜೇತರಿಗೆ ಒಂದು ಲಕ್ಷ ರೂ ಬಹುಮಾನ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗೃಹ ಸಚಿವರ ಸಲಹೆಗಾರರಾದ ಕೆಂಪಯ್ಯ ಸೇರಿದಂತೆ ಇನ್ನಿತರ ಪೊಲೀಸ್ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

-----------------